

# ಮಾತೊಂದಿದ್ದರೆ ಸಾಕೆ?

■ ಗೌರಿ

‘ತಿಥಿ’ ಕನ್ನಡ ಚಿತ್ರರಂಗವು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಸಿನಿಮಾ. ಚಂದನವನವು ಆ ಸಿನಿಮಾದ ಆತ್ಮದಿಂದ ಎಷ್ಟು ಪ್ರಭಾವಿತವಾಗಿದೆಯೋ ಗೊತ್ತಿಲ್ಲ, ಅದರ ಹೊರಚಹರೆಗಳು ಮಾತ್ರ ಸಾಕಷ್ಟು ಅಗ್ಗದ ಅನುಕರಣೆಗೆ ಒಳಗಾಗಿವೆ. ‘ತಿಥಿ’ ಸಿನಿಮಾದ ಪಾತ್ರಧಾರಿಗಳನ್ನು ಒಳಗೊಂಡು ಬಂದ ಸಾಲು ಸಾಲು ಸಿನಿಮಾಗಳೆಲ್ಲವೂ ಇಂಥ ಅಗ್ಗದ ಅನುಕರಣೆಯ ನಿದರ್ಶನಗಳೇ ಆಗಿವೆ.

ಗ್ರಾಮೀಣ ಭಾಷೆ ಮತ್ತು ಗ್ರಾಮದ ರಾ ಅನಿಸುವಂಥ ಪರಿಸರವನ್ನು ಫ್ರೇಮ್ ಒಳಗೆ ತಂದುಬಿಟ್ಟರೆ ಅದು ಒಳ್ಳೆಯ ಸಿನಿಮಾ ಆಗುತ್ತದೆ ಎಂಬ ಭ್ರಮೆ ಹುಟ್ಟಿರುವುದೂ ಅಗ್ಗದ ಅನುಕರಣೆಯ ಮತ್ತೊಂದು ಮುಖ. ಈ ಮುಖವಾಡ ಹೊತ್ತ ಹಲವು ಸಿನಿಮಾಗಳು ಕಿರುಚಿತ್ರಗಳು ಕನ್ನಡದಲ್ಲಿ ಬಂದಿವೆ, ಬರುತ್ತಿವೆ.

ಜನಾರ್ದನ್ ಮೌರ್ಯ ನಿರ್ದೇಶನದ ಕಿರುಚಿತ್ರ ‘ಬ್ಲೌಸ್’ ಕೂಡ ಗ್ರಾಮಬದುಕಿನ ಆವರಣದಿಂದ ಗಮನಸೆಳೆಯುತ್ತದೆ. ರಿಯಲಿಸ್ಟಿಕ್ ರೀತಿಯಲ್ಲಿಯೇ ಗ್ರಾಮೀಣ ಭಾಗದ ಬಡ ಕುಟುಂಬವೊಂದರ ಚಿತ್ರಣದೊಂದಿಗೆ ಚಿತ್ರ ಆರಂಭಗೊಳ್ಳುತ್ತದೆ. ಅಲ್ಲಿನ ವಾತಾವರಣ, ಆಡುಭಾಷೆ ಸೊಗಡು ಎಲ್ಲರೂ ಥಟ್ಟನೆ ಮನಸಲ್ಲಿ ಕೂತು ಆಪ್ತವೆನಿಸುತ್ತದೆ.

ಹಲವು ವರ್ಷಗಳ ನಂತರ ಬಂದಿರುವ ಊರ ಜಾತ್ರೆಯಲ್ಲಿ ಹಾಕಿಕೊಳ್ಳಲು ಹೆಂಡತಿ ಬ್ಲೌಸ್ ಹೊಲಿಯಲು ಕೊಟ್ಟಿದ್ದಾಳೆ. ಗಂಡ ಅದನ್ನಿನ್ನೂ ತಂದುಕೊಟ್ಟಿಲ್ಲ. ಮಕ್ಕಳಿಗೆ, ಹೆಂಡತಿಗೆ ಬಟ್ಟೆ ಕೊಡಿಸಲೂ ಆಗದಷ್ಟು ಬಡತನ ಅವರನ್ನು ಸುಡುತ್ತಿದೆ. ಉರಿಯುವ ಬೆಂಕಿಯ ಎದುರಿಗೇ ಆ ಬಡತನದ ಕಾವೂ ಅರಿವಿಗೆ ಬರುತ್ತದೆ.

ಹೆಸರು: ಬ್ಲೌಸ್ (ಕನ್ನಡ)
ನಿರ್ದೇಶನ: ಜನಾರ್ದನ್ ಮೌರ್ಯ
ಧ್ವನಿ ವಿನ್ಯಾಸ: ನಾಗೇಂದ್ರ ನಿಟ್ಟೂರು
ಛಾಯಾಗ್ರಹಣ: ಆಕಾಶ್ ಭಟ್
ಸಂಕಲನ: ಗುರು ಸತೀಶ್ ಎಂ.
ತಾರಾಗಣ: ಯತೀಶ್ ಎನ್. ಕೊಳ್ಳೇಗಾಲ, ಮಧುಶ್ರೀ, ಆಲೂರು ದೊಡ್ಡನಿಂಗಪ್ಪ, ಮೈಮ್ ರಮೇಶ್



ಬಡತನ ಎನ್ನುವುದು ಬದುಕಿನ ಪ್ರಾಥಮಿಕ ಅಗತ್ಯಗಳ ಪೂರೈಕೆಗೆ ಇರುವ ತೊಡಕಷ್ಟೇ ಅಲ್ಲ, ಅದು ಸ್ವಾಭಿಮಾನದ, ಗೌರವಯುತವಾದ ಬದುಕನ್ನೂ ಕಸಿದುಕೊಳ್ಳುವ ಸಂಗತಿ. ಹಣ ಇದ್ದವರನ್ನು ಕಂಡರೆ ಎಂಥವನಾದರೂ ಕೈ ಮುಗಿದು ಗೌರವ ಕೊಡುತ್ತಾನೆ. ಕಿಸೆ ಖಾಲಿಯಾದವನನ್ನು ಯಾರೂ ಮೂಸುವುದಿಲ್ಲ ಎಂಬುದು ಜನಪ್ರಿಯವಾದ ನಂಬಿಕೆ. ಇದನ್ನೇ ‘ಬ್ಲೌಸ್’ ಕಿರುಚಿತ್ರ ಹೇಳಲು ಹೊರಟಿರುವುದು. ಆದರೆ ಇಷ್ಟನ್ನೇ ಹೇಳುವುದಾದರೆ ಕಿರುಚಿತ್ರದಲ್ಲಿ ಬರುವ ಹಿಂದಿನ ವೃತ್ತಾಂತಗಳ ಅಗತ್ಯ ಏನಿತ್ತು ಎಂಬ ಪ್ರಶ್ನೆ ಕಾಡುತ್ತದೆ.

ಸಂದೇಶವನ್ನು ಕೊಡುವುದು, ಜನಪ್ರಿಯ ವ್ಯಾಖ್ಯಾನಗಳನ್ನು ನೀಡುವುದೇ ಸಿನಿಮಾದ ಮುಖ್ಯ ಉದ್ದೇಶವಾಗಿಬಿಟ್ಟರೆ ಅದು ಆತ್ಮಹೀನ ಶರೀರದಂತೆ ಭಾಸವಾಗುತ್ತದೆ. ಅದಕ್ಕೆ ನೀವು ಎಷ್ಟೇ ಬಗೆಯಲ್ಲಿ ಸಿಂಗರಿಸಿದರೂ ವ್ಯರ್ಥವೇ. ಒಂದು ಸಿನಿಮಾ ನೀಡುವ ಸಂದೇಶ ಮಾತುಗಳಲ್ಲಿಯೇ ವ್ಯಕ್ತವಾಗಬೇಕಿಲ್ಲ. ಅದು ಆ ಸಿನಿಮಾ ಕಟ್ಟಿಕೊಡುವ ಇಮೇಜ್‌ಗಳಲ್ಲಿ, ಅದು ಸೃಷ್ಟಿಸುವ ಆವರಣದಲ್ಲಿ ಅಂತರ್ಗತವಾಗಿರಬೇಕು. ಒಂದರಿಂದ ಇನ್ನೊಂದು ಬೇರೆ ಮಾಡಿ ನೋಡುವುದು ಸಾಧ್ಯವಿಲ್ಲ ಎನ್ನುವಷ್ಟು ಐಕ್ಯವಾಗಿರಬೇಕು. ಆಗ ಸಿನಿಮಾ ಮತ್ತು ಆ ಜೀವನದೃಷ್ಟಿ ಎರಡೂ ಮನಸೊಳಗೆ ಇಳಿಯುತ್ತವೆ, ಸಾರ್ಥಕಗೊಳ್ಳುತ್ತವೆ. ಆದರೆ ಈ ಕಿರುಚಿತ್ರದಲ್ಲಿ ಹಾಗೆ ಆಗಿಲ್ಲ. ಹಣ ಇದ್ದರೆ ಗೌರವ ಸಿಗುತ್ತದೆ, ಇಲ್ಲದಿದ್ದರೆ ತಿರಸ್ಕಾರದಿಂದ ನೋಡುತ್ತಾರೆ ಎಂಬುದನ್ನು ಹೇಳಲಿಕ್ಕಾಗಿ ಬಳಕೆಯಾಗಿರುವುದು ಕೊನೆಯ ಕೆಲವು ನಿಮಿಷಗಳು. ಅಲ್ಲಿಯವರೆಗಿನ ಆವರಣಕ್ಕೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತಿದೆ.

ಸೀರೆ ಸಿಗದ ನೋವ ಬ್ಲೌಸ್ ಹೊಲಿಸಿಕೊಂಡು ನುಂಗುವ ಹೆಣ್ಣಿನ ತಳಮಳದ ಕಥನವಾಗಿಸುವ ಎಲ್ಲ ಸಾಧ್ಯತೆಯೂ ಈ ಕಿರುಚಿತ್ರಕ್ಕಿತ್ತು. ಹೆಂಡತಿಯ ಸಣ್ಣ ಆಸೆಯನ್ನೂ ಪೂರೈಸಲಾಗದ ಗಂಡನ ಅಸಹಾಯಕ ಕಥನವಾಗಿಯೂ ಇದು ಗೆಲ್ಲಬಹುದಿತ್ತು. ಬಡತನದ ಅರಿವಿಲ್ಲದೆ ಬೆಳೆಯುತ್ತಿರುವ ಹುಡುಗನ ಮುಗ್ಧತೆಯನ್ನು ಬಡತನ ಕಸಿಯುವ ಕ್ರೌರ್ಯದ ಕಥನವೂ ಆಗಬಹುದಿತ್ತು. ಆದರೆ ಇವೆಲ್ಲದಕ್ಕಿಂತ ನಿರ್ದೇಶಕರಿಗೆ ಒಂದು ಜನಪ್ರಿಯವಾದ ಸಂದೇಶವನ್ನು ಕೊಡುವುದೇ ಮುಖ್ಯವಾಗಿದೆ. ಹಾಗಾಗಿಯೇ ಈ ಕಿರುಚಿತ್ರ ಹಲವು ಸತ್ವಶಾಲಿ ಅಂಶಗಳನ್ನು ಹೊಂದಿದ್ದೂ ಸೋತಿದೆ.

ಕಿರುಚಿತ್ರ ವೀಕ್ಷಣೆಗೆ https://bit.ly/3IDaL4B ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.